## ನಗರದವರ ಕಡೆಗಣನೆ

ಕಳೆದ ಐದಾರು ಸೀಸನ್‌ಗಳಿಂದ 'ಸರಿಗಮಪ' ರಿಯಾಲಿಟಿ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಸಾಮಾನ್ಯವಾಗಿ ಹಳ್ಳಿಯಿಂದ ಬಂದ ಸ್ಪರ್ಧಿಗಳ ಪಾಲಿಗೆ ಸೇರಿದೆ. ಇಲ್ಲಿ ನಗರದವರನ್ನು ಕಡೆಗಣಿಸಲಾಗುತ್ತಿದೆ ಎನ್ನುವುದು ಮೇಲ್ನೋಟಕ್ಕೆ ಅನ್ನಿಸುತ್ತಿದೆ. ಈ ಬಾರಿಯೂ ಹಾಗೆಯೇ ಆಗಿದೆ. ಸಂಗೀತವನ್ನು ಶಾಸ್ತ್ರೀಯವಾಗಿ ಅಭ್ಯಾಸ ಮಾಡಿ ಸ್ಪರ್ಧೆಗೆ ಬಂದವರನ್ನು ಅವರು ನಗರದವರೆಂದು ಕಡೆಗಣಿಸಿ, ಹವ್ಯಾಸಕ್ಕಾಗಿ ಹಾಡುವ ಹಳ್ಳಿಯಿಂದ ಬಂದವರನ್ನು ಆಯ್ಕೆ ಮಾಡುತ್ತಿದ್ದಾರೆ ಎಂದೆನಿಸುತ್ತದೆ.

ಹೆಸರೇನೊ ರಿಯಾಲಿಟಿ ಶೋ. ಆದರೆ ಅಲ್ಲಿ ನಡೆಯುವ ಬಹುತೇಕ ಪ್ರಕ್ರಿಯೆಗಳು ರಿಯಲ್ ಆಗಿರುವುದಿಲ್ಲ. ನಿಜವಾದ ಪ್ರತಿಭೆಯನ್ನು ಕಡೆಗಣಿಸಿದರೆ ಅವರಿಗಾಗುವ ನೋವು ಎಂಥದ್ದು ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ನಿಜವಾದ ಪ್ರತಿಭೆಗಳಿಗೆ ಅನ್ಯಾಯವಾಗಬಾರದು ಎನ್ನುವುದು ಇಲ್ಲಿರುವ ಕಾಳಜಿ.

—ಮುರಲೀಧರ ಕುಲಕರ್ಣಿ, ಬೀದರ

## ರಾಮರಾಮ ಮುಗಿಯಿತಲ್ಲ

ಝೀ ಕನ್ನಡದ 'ಸೀತಾರಾಮ' ಈ ವಾರ ಅಂತ್ಯ ಕಂಡಿದೆ. ಸಾವಿರಕ್ಕೂ ಅಧಿಕ ಸಂಚಿಕೆ ಕಂಡ ಈ ಧಾರಾವಾಹಿ ಇತ್ತೀಚಿನವರೆಗೂ ರಂಜಿಸುತ್ತಿತ್ತು.

ಧಾರಾವಾಹಿಗಳೆಂದರೆ ಸ್ವಾಟೆ ತಿರುಗಿಸುವ ನನ್ನ ಪತಿ ತಮ್ಮ ಕೆಲಸ ಬಿಟ್ಟು 'ಸೀತಾರಾಮ' ನೋಡಲು ಹಾಜರಾಗುತ್ತಿದ್ದರು. ನಮಗೆ ಮುಖ್ಯ ಆಕರ್ಷಣೆಯಾಗಿದ್ದ ಸಿಹಿ ಪಾತ್ರವನ್ನು ಅಪಘಾತದಲ್ಲಿ ಸಾಯಿಸಿದ್ದು ನೋವನ್ನು ಉಂಟುಮಾಡಿತು. ಕಥೆಗೆ ಅನಗತ್ಯ ತಿರುವು ಕೊಟ್ಟದ್ದೂ ಅಲ್ಲದೆ, ಪ್ರಸಾರದ ವೇಳೆಯನ್ನು ಬದಲಾಯಿಸಿದ್ದು ಅದರ ಜನಪ್ರಿಯತೆಯನ್ನು ಕುಗ್ಗಿಸಿತು ಎಂದು ಅನ್ನಿಸುತ್ತದೆ. ಅಂತ್ಯಗೊಳಿಸಲು ಒತ್ತಾಯದಿಂದ ಶರವೇಗದಲ್ಲಿ ಓಡಿಸಿದ್ದಾರೆ. ಏನೇ ಆಗಲಿ, ಇನ್ನೊಂದು ವರ್ಷ ಧಾರಾವಾಹಿ ಎಳೆಯದೇ ನಮ್ಮನ್ನು ಬಿಡುಗಡೆಗೊಳಿಸಿದ್ದಕ್ಕೆ ಧನ್ಯವಾದಗಳು.

—ಕೆ. ಲೀಲಾ ಶ್ರೀನಿವಾಸ್, ಹರಪನಹಳ್ಳಿ

ವಾರದ ಪತ್ರ

## ನಾವೂ ಬದಲಾಗೋಣ



ಹಿಂದೂ ಸಂಪ್ರದಾಯದಲ್ಲಿ ನವವಧುವನ್ನು ಮನೆಗೆ ತುಂಬಿಸಿಕೊಳ್ಳುವಾಗ ಲಕ್ಷ್ಮಿ ಸ್ವರೂಪ ಎಂದೇ ಶಾಸ್ತ್ರವನ್ನು ಮಾಡುತ್ತಾರೆ. ಗೃಹ ಪ್ರವೇಶದ ಸಮಯದಲ್ಲಿ ಸೊಸೆಯನ್ನು ಮನೆ ಮುಖ್ಯದ್ವಾರದ ಹೊಸ್ತಿಲಲ್ಲಿ ನಿಲ್ಲಿಸಿ ತಿಲಕ ಇಟ್ಟು ಆರತಿ ಬೆಳಗುತ್ತಾರೆ. ಅಕ್ಕಿ ತುಂಬಿದ ಸೇರಿನ ಮೇಲೆ ಬೆಲ್ಲದ ಅಚ್ಚಿಟ್ಟಿರುತ್ತಾರೆ. ಮನೆಯ ಒಳಗಡೆ ಕಾಲೂರುವ ಮುನ್ನ ವಧು ಸೇರನ್ನು ಒದೆಯುತ್ತಾಳೆ. ಈ ಆಚರಣೆ ಸಂಪತ್ತು ಮತ್ತು ಸಮೃದ್ಧಿಯ ದೇವತೆ ಮನೆಗೆ ಪ್ರವೇಶಿಸಿದಂತೆ ಎನ್ನುವುದನ್ನು ಬಿಂಬಿಸುತ್ತದೆ.

ಕಲರ್ಸ್ ಕನ್ನಡದ 'ಯಜಮಾನ'ದಲ್ಲಿ ಒಪ್ಪಂದದ ಮದುವೆಯಾದ ಒರಟು ಸ್ವಭಾವದ ಝಾನ್ಸಿ ಗಂಡ ರಾಘವೇಂದ್ರನ ಮನೆ ಪ್ರವೇಶ ಮಾಡುವಾಗ ಹೊಸ್ತಿಲ ಮೇಲಿಟ್ಟ ಅಕ್ಕಿ ತುಂಬಿದ ಸೇರು, ಬೆಲ್ಲವನ್ನು ಒದೆಯುವುದಿಲ್ಲ ಎಂದು ನಿರಾಕರಿಸುತ್ತಾಳೆ. ಅದಕ್ಕೆ ಕೈ ಮುಗಿದು ಒಳಗೆ ಪ್ರವೇಶ ಮಾಡುವ ದೃಶ್ಯ ನನಗೆ ಮೆಚ್ಚುಗೆ ಆಯಿತು. ಇಂಥ ಬದಲಾವಣೆ ತಂದಿರುವುದು ಸೂಕ್ತ. ವೀಕ್ಷಕರಾದ ನಾವು ಕೂಡ ಈ ಬದಲಾವಣೆಯನ್ನು ರೂಢಿಸಿಕೊಳ್ಳಬಹುದು ಎಂದೆನಿಸಿತು.

—ಸುಧಾ ಪ್ರಶಾಂತ್ ಟಿ., ಮುಂಬೈ

## ಸ್ಮರಣೀಯ ಸಂಚಿಕೆ

ಝೀ ಕನ್ನಡದ ಜನಪ್ರಿಯ 'ಸರಿಗಮಪ' ಕಾರ್ಯಕ್ರಮ ಅಂತಿಮ ಘಟ್ಟಕ್ಕೆ ಬಂದ ಸಂದರ್ಭದಲ್ಲಿ ಅಂತಿಮ ಸ್ಪರ್ಧೆಗೆ ಆಯ್ಕೆಯಾಗದವರೂ ಒಟ್ಟಿಗೆ ಸೇರಿ ಹಾಡಿ ರಂಜಿಸಿದರು. ಶಿವಾನಿ ಹಾಡಿದ ಸಿದ್ಧರ ಹಾಡಿಗೆ ತೀರ್ಪುಗಾರ ಗಾಯಕರೂ ಜೊತೆಯಾಗಿದ್ದು ಅದ್ಭುತ ವಾತಾವರಣವನ್ನು ನಿರ್ಮಿಸಿತು. ವಾದ್ಯಗೋಷ್ಠಿ ಕರ್ಣಾನಂದವನ್ನು ಉಂಟುಮಾಡಿತು. ಗಾಯಕ ರಾಜು ಅವರನ್ನು ಸನ್ಮಾನಿಸಿದ್ದು ನಿಜಕ್ಕೂ ವಿಶೇಷ ಅನಿಸಿತು.

—ಭಾರತೀ ಗಂಗಾಧರ್, ಬೆಂಗಳೂರು

## ಪಾಷಾಣಕ್ಕೆ ಬೇಕೆ ಶೋಕೇಸ್?

ಕಲರ್ಸ್‌ನ 'ಭಾರ್ಗವಿ ಎಲ್‌ಎಲ್‌ಬಿ' ಕುತೂಹಲವನ್ನು ಉಳಿಸಿಕೊಂಡು ಸಾಗುತ್ತಿದೆ. ಈ ಗಡಿಬಿಡಿಯಲ್ಲಿ ಕೆಲವು ವಾಸ್ತವಾಂಶಗಳನ್ನು ಗಾಳಿಗೆ ತೂರಿ ಬಿಟ್ಟಿದ್ದಾರೆ. ಮನೆಬಿಟ್ಟು ಹೋಗಿದ್ದ ಮಗಳು ಬೃಂದಾ ತನ್ನ ಸಂಸಾರವನ್ನು ಸರಿಪಡಿಸಿಕೊಳ್ಳಲು ತವರು ಮನೆಗೆ ಬರುತ್ತಾಳೆ. ತಾಯಿಯನ್ನು ಬ್ಲ್ಯಾಕ್ ಮೇಲ್ ಮಾಡುತ್ತಾ, ತನಗೆ ಸಹಾಯ ಮಾಡದಿದ್ದರೆ ಸತ್ತುಹೋಗುತ್ತೇನೆ ಎಂದು ಶೋ ಕೇಸಿನಲ್ಲಿದ್ದ ವಿಷದ ಬಾಟಲಿಯನ್ನು ತೆಗೆದುಕೊಳ್ಳುತ್ತಾಳೆ. ಇದು ಹಾಸ್ಯಾಸ್ಪದ ಅಲ್ಲವೇ? ಯಾರಾದರೂ ವಿಷವನ್ನು ಪ್ರದರ್ಶನಕ್ಕೆ ಇಟ್ಟಿರುತ್ತಾರೆಯೇ?

—ಪುಷ್ಪಾ ಎನ್.ಕೆ. ರಾವ್

## ಭಾರಿ 'ಭರ್ಜರಿ'

ಝೀ ಕನ್ನಡ 'ಭರ್ಜರಿ ಬ್ಯಾಚುಲರ್ಸ್' ಚೆನ್ನಾಗಿ ಬರುತ್ತಿದ್ದು, ರಾಜ್ಯದ ಬೇರೆ ಬೇರೆ ಜಿಲ್ಲೆಗಳನ್ನು ಪರಿಚಯಿಸುತ್ತಿದೆ. ಆಯಾ ಭಾಗದ ಕಲೆ, ಸಂಸ್ಕೃತಿ ಆಚಾರ ವಿಚಾರ, ಅಡುಗೆ, ಉಡುಗೆ–ತೊಡುಗೆಗಳ ಬಗ್ಗೆ ಅರಿವು ಮೂಡಿಸುತ್ತಿದೆ. ಅಲ್ಲಿನ ಜನ ಮಾತನಾಡುವ ಭಾಷೆ ಕನ್ನಡವಾದರೂ ಅದರಿಂದ ಬೇರೆಯದೇ ಕನ್ನಡ ಪರಿಚಯ ಆಗುತ್ತದೆ. ಅವರು ಮಾತನಾಡುವ ಶೈಲಿಯ ಜೊತೆ ಕೂಡು ಕುಟುಂಬದ ಬದುಕು ಮಾದರಿ ಅನಿಸುತ್ತದೆ. ವಿಭಿನ್ನ ಜೀವನ ಶೈಲಿ ಕುತೂಹಲ ಮೂಡಿಸುತ್ತದೆ. ಇಂತಹ ಭರ್ಜರಿ ಕಾರ್ಯಕ್ರಮಗಳು ಮೇಲಿಂದ ಮೇಲೆ ಪ್ರಸಾರವಾಗುತ್ತಿರಲಿ.

—ಸಿ.ಕೆ. ಗಣಪ್ಪನವರ, ಮುಂಡರಗಿ

## ಭೋರ್ಗರೆದ ಭಾರ್ಗವಿ

ಝೀ ಕನ್ನಡದ 'ಭಾರ್ಗವಿ ಎಲ್‌ಎಲ್‌ಬಿ' ಕುತೂಹಲದಿಂದ ಸಾಗುತ್ತಿತ್ತು. ಇದೀಗ ಅದೇಕೋ ಬೋರ್ ಅನ್ನಿಸುತ್ತಿದೆ. ಭಾರ್ಗವಿ ಅಂತಿಂಥ ಹೆಣ್ಣಲ್ಲ. ಒಂದು ದಿನವೂ ವಾದ–ಪ್ರತಿವಾದ ಮಾಡದಿದ್ದರೂ ಹಿರಿಯ ವಕೀಲರಿಗೆ ಆವಾಜ್ ಹಾಕುತ್ತಾಳೆ.

ಸಂತ್ರಸ್ತೆಯ ಮದುವೆ ನಿಲ್ಲಿಸುತ್ತೇನೆಂದು ಹೇಳಿ, ಅದಕ್ಕೆ ಸಂಬಂಧಿಸಿದಂತೆ ಯಾವ ರೀತಿಯಲ್ಲೂ ಪ್ರಯತ್ನಿಸುವುದಿಲ್ಲ. ಅತ್ತ ಮದುವೆಯ ಉದ್ವಿಗ್ನತೆಯಲ್ಲಿ ವಧು ಇದ್ದರೆ ಇತ್ತ ವಿಶೇಷ ಪೊಲೀಸ್ ಅಧಿಕಾರಿ ಜೊತೆಗೂಡಿ ಖಳರನ್ನು ಹಣ್ಣುಗಾಯಿ ನೀರುಗಾಯಿ ಮಾಡಿ ಪೋಸ್ ಕೊಡುತ್ತಾ ನಿಧಾನವಾಗಿ ಮಂಟಪ ಪ್ರವೇಶಿಸುತ್ತಾಳೆ.

ಅವಳ ಪ್ರಿಯಕರ ಕೋರ್ಟ್ ಹಾಲಿನಲ್ಲಿಯೇ ಪ್ರೇಮ ನಿವೇದನೆಯನ್ನು ಮಾಡುತ್ತಾನೆ. ಪೊಲೀಸ್ ಅಧಿಕಾರಿ ಚುನಾಯಿತ ಜನಪ್ರತಿನಿಧಿಗೆ ಆವಾಜ್ ಹಾಕುವ ಸನ್ನಿವೇಶ ವಾಸ್ತವಕ್ಕೆ ಹತ್ತಿರವಿಲ್ಲ. ಲೇಖಕರಿಗೆ ಶಾಸಕಾಂಗ, ಕಾರ್ಯಾಂಗ ಮತ್ತು ಸಂವಿಧಾನದ ಪರಿಚಯ ಇರಬೇಕು. ಕಥೆಯನ್ನು ನಿರೂಪಿಸುವಾಗ ಅದರ ಮೂಲ ಸ್ವರೂಪಕ್ಕೆ ಧಕ್ಕೆ ಆಗದಂತೆ ನೋಡಿಕೊಳ್ಳಬೇಕು.

—ಕೆ. ಶ್ರೀನಿವಾಸರಾವ್, ಹರಪನಹಳ್ಳಿ

